# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

KANNADA POST

ಕನ್ನಡ ದಿನ ಪತ್ರಿಕೆ Kannada Daily

ಹಾಸನ E-mail : kannadapostnews@gmail.com / ಕನ್ನಡ post Price: ₹1

Vol.No.01 | Issue. 252 | Pages. 2 | Date: 20-08-2025, WEDNESDAY RNI NO: KARKAN/2024/89601

ಸಂಪುಟ : 01 - ಸಂಚಿಕೆ : 252 - ಪುಟಗಳು : 2 20-08-2025 ಬುಧವಾರ Ph: 8762954248 ದರ : ₹1


# ಪರಿಸರ ಸ್ನೇಹಿ ಗಣೇಶೋತ್ಸವಕ್ಕೆ ಸಲಹೆ

## ಜಿಲ್ಲೆಯ ವಿವಿಧೆಡೆ ಜಾಗೃತಿ ಸಭೆ | ಷರತ್ತು ಉಲ್ಲಂಘಿಸಿದರೆ ಕಾನೂನು ಕ್ರಮದ ಎಚ್ಚರಿಕೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಆಲೂರು: ಪರಿಸರ ಸಂರಕ್ಷಣೆ ಹಿತದೃಷ್ಟಿಯಿಂದ ಮಣ್ಣಿನಲ್ಲಿ ತಯಾರಾದ ಗಣೇಶ ಮೂರ್ತಿ ಪ್ರತಿಷ್ಠಾಪಿಸಿ ಗಣೇಶೋತ್ಸವ ಆಚರಿಸಬೇಕು ಎಂದು ತಹಶೀಲ್ದಾರ್ ಹೆಚ್. ಮಲ್ಲಿಕಾರ್ಜುನ ಸಲಹೆ ನೀಡಿದರು.

ಪಟ್ಟಣದ ಮಿನಿ ವಿಧಾನಸೌಧ ಸಭಾಂಗಣದಲ್ಲಿ ಗೌರಿ ಗಣೇಶ ಹಬ್ಬದ ಅಂಗವಾಗಿ ಪ್ಲಾಸ್ಟರ್ ಆಫ್ ಪ್ಯಾರಿಸ್ (ಪಿಒಪಿ) ಹಾಗೂ ರಾಸಾಯನಿಕ ಮುಕ್ತ ಗುಣಗಳುಳ್ಳ ವಸ್ತುಗಳನ್ನು ಬಳಸಿ ತಯಾರಿಸುವ ಗಣೇಶ ವಿಗ್ರಹಗಳ ಉತ್ಪಾದನೆ, ಸಂಗ್ರಹ, ಮಾರಾಟ ಮತ್ತು ವಿಸರ್ಜನೆಯನ್ನು ನಿಷೇಧಿಸಿರುವ ಕುರಿತು ಏರ್ಪಡಿಸಿದ್ದ ಜಾಗೃತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಪುರಾತನ ಕಾಲದಿಂದಲೂ ಗೌರಿ ಗಣೇಶ ಮೂರ್ತಿಯನ್ನು ಜೇಡಿ ಮಣ್ಣಿನಿಂದ ತಯಾರಿಸಿ ಪೂಜಿಸಿ, ಆರಾಧಿಸಿ, ನದಿ, ಬಾವಿ, ಕೆರೆ, ಕಟ್ಟೆಗಳಲ್ಲಿ ಲೀನವಾಗುವಂತೆ ವಿಸರ್ಜಿಸುವ ಮೂಲಕ ಹಬ್ಬವನ್ನು ಅದ್ದೂರಿಯಾಗಿ ಆಚರಿಸಲಾಗುತ್ತದೆ.

ಇತ್ತೀಚಿನ ವರ್ಷಗಳಲ್ಲಿ ಪಿಒಪಿಯಿಂದ ತಯಾರಿಸುವ ಮತ್ತು ರಾಸಾಯನಿಕ ಮುಕ್ತ ಬಣ್ಣವನ್ನು ಬಳಸುವುದರಿಂದ ಪರಿಸರ ಮತ್ತು ನೀರು ಕಲ್ಮಶವಾಗಿ ಮನುಷ್ಯರು, ಪ್ರಾಣಿಗಳ ಮೇಲೆ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಈ ಕುರಿತು ಗೌರಿ, ಗಣೇಶ ಮೂರ್ತಿಗಳನ್ನು ತಯಾರಿಸುವ, ಮಾರಾಟ ಮಾಡುವ ಮತ್ತು ಪ್ರತಿಷ್ಠಾಪಿಸುವ ಸಮಿತಿಗಳ ಗಮನಕ್ಕೆ ತಂದು ಪಿಒಪಿ ಮತ್ತು ರಾಸಾಯನಿಕ ಬಣ್ಣದಿಂದ ತಯಾರು ಮಾಡಿರುವ ಮೂರ್ತಿಗಳನ್ನು ಹೊರತುಪಡಿಸಿ ಮಣ್ಣಿನಿಂದ ತಯಾರು ಮಾಡುವ ಮೂರ್ತಿಗಳನ್ನು ಪ್ರತಿಷ್ಠಾಪಿಸಿ ಪೂಜಿಸಿ ವಿಜೃಂಭಣೆಯಿಂದ ಹಬ್ಬವನ್ನು ಆಚರಣೆ ಮಾಡೋಣ ಎಂದರು.

ಮೂರ್ತಿಗಳನ್ನು ವಿಸರ್ಜನೆ ಮಾಡುವ ಸಂದರ್ಭದಲ್ಲಿ ಸಾಧ್ಯವಾದಷ್ಟು ಜಲಮಾಲಿನ್ಯ, ಶಬ್ಧಮಾಲಿನ್ಯವಾಗದಂತೆ ಸಹಕರಿಸಬೇಕು. ಜನ, ಜಾನುವಾರುಗಳು ಬಳಸುವ ನೀರಿನಲ್ಲಿ ವಿಸರ್ಜಿಸಬಾರದು. ಮೂರ್ತಿಗಳನ್ನು ಪ್ರತಿಷ್ಠಾಪಿಸುವ ಮುನ್ನ ಸ್ಥಳೀಯ ಪಂಚಾಯಿತಿ ಮತ್ತು ಪೊಲೀಸ್ ಅನುಮತಿ ಕೊಡುವ ಸಂದರ್ಭದಲ್ಲಿ ನಿಯಮಗಳ ಪಟ್ಟಿಯನ್ನು ಲಗತ್ತಿಸಬೇಕು. ರಾತ್ರಿ 10 ರಿಂದ ಬೆಳಿಗ್ಗೆ 6ರ ವರೆಗೆ ಧ್ವನಿವರ್ಧಕ ಬಳಸಬಾರದು. ನಿಯಮ ಮೀರಿದರೆ ಗರಿಷ್ಠ 1 ಲಕ್ಷ ರೂ. ದಂಡದೊಂದಿಗೆ 5 ವರ್ಷ ಕಾರಾಗೃಹ ಶಿಕ್ಷೆ ಅನುಭವಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ತಾಲ್ಲೂಕು, ಪ್ರತಿ ಗ್ರಾಮ ಪಂಚಾಯಿತಿ, ಪಟ್ಟಣ ಪಂಚಾಯಿತಿ ಕೇಂದ್ರಗಳಲ್ಲಿ ಅಗತ್ಯವಿರುವ ಸ್ಥಳದಲ್ಲಿ ಬೃಹತ್ ಫ್ಲೆಕ್ಸ್ ಹಾಕುವ ಮೂಲಕ ಸಾರ್ವಜನಿಕರಲ್ಲಿ ಪರಿಸರದ ಬಗ್ಗೆ ಜಾಗೃತಿ ಮೂಡಿಸಬೇಕು. ಗಣೇಶ ಮೂರ್ತಿ ತಯಾರು ಮಾಡುವವರನ್ನು ಸಂಪರ್ಕಿಸಿ ನಿಯಮಗಳನ್ನು ಪಾಲಿಸುವಂತೆ ಸೂಚನೆ ನೀಡಬೇಕು ಎಂದರು.

ರಾಜಸ್ವ ನಿರೀಕ್ಷಕ ಗೋವಿಂದರಾಜು, ತಾ.ಪಂ. ವ್ಯವಸ್ಥಾಪಕ ರಾಜೇಶ್, ಸಹಾಯಕ ಸಬ್ ಇನ್ಸ್‌ಪೆಕ್ಟರ್ ಚಂದ್ರಶೇಖರ್, ಲಲಿತಮ್ಮ, ಸಾಗರ್ ಇದ್ದರು.

## ಪೊಲೀಸ್ ಅನುಮತಿ ಕಡ್ಡಾಯ



ಬೇಲೂರು: ಸಾರ್ವಜನಿಕ ಸ್ಥಳಗಳಲ್ಲಿ ಗಣೇಶ ಮೂರ್ತಿ ಪ್ರತಿಷ್ಠಾಪಿಸುವವರು ಹತ್ತಿರದ ಪೊಲೀಸ್ ಠಾಣೆಯಿಂದ ಕಡ್ಡಾಯವಾಗಿ ಅನುಮತಿ ಪಡೆಯಬೇಕು ಎಂದು ಆರಕ್ಷಕ ನಿರೀಕ್ಷಕ ರೇವಣ್ಣ ಸೂಚಿಸಿದರು.

ಪಟ್ಟಣದ ಆರ್‌ವಿ ಕಲ್ಯಾಣ ಮಂಟಪದಲ್ಲಿ ಗೌರಿ ಗಣೇಶ ಹಬ್ಬದ ಪ್ರಯುಕ್ತ ಗಣೇಶ ವಿಗ್ರಹ ಪ್ರತಿಷ್ಠಾನೆ ಸಂಬಂಧ ಪೊಲೀಸ್ ಇಲಾಖೆಯಿಂದ ನಡೆದ ಸಭೆಯಲ್ಲಿ ಮಾತನಾಡಿ, ಬೇಲೂರು ಪೊಲೀಸ್ ಇಲಾಖೆ ವ್ಯಾಪ್ತಿಯಲ್ಲಿ ಸುಮಾರು 80 ಗಣೇಶ ವಿಗ್ರಹ ಸ್ಥಾಪನೆಯಾಗುವ ಬಗ್ಗೆ ವರದಿ ಬಂದಿದೆ. ಗ್ರಾಮ ಪಂಚಾಯಿತಿ, ಪುರಸಭೆ, ಸೆಸ್ಕ್ ಮತ್ತು ಅಗ್ನಿಶಾಮಕ ದಳ ಇಲಾಖೆಯ ಅನುಮತಿ ಪಡೆದ ಬಳಿಕ ಪೊಲೀಸ್ ಇಲಾಖೆಯಿಂದ ಅಧಿಕೃತವಾಗಿ ಸ್ಥಳ ಪರಿಶೀಲನೆ ನಡೆಸಿ ಅನುಮತಿ ನೀಡಲಾಗುತ್ತದೆ. ಆಯೋಜಕರು ಕಡ್ಡಾಯವಾಗಿ ಪ್ರತಿಷ್ಠಾನೆ ಸ್ಥಳದಲ್ಲಿ ಸಿಸಿಟಿವಿ, ಸ್ವಚ್ಛತೆಗೆ ಒತ್ತು, ಫ್ಲೆಕ್ಸ್‌ಗೆ ಕಡಿವಾಣ ಸೇರಿದಂತೆ 25ಕ್ಕೂ ಅಧಿಕ ಷರತ್ತುಗಳನ್ನು ಕಟ್ಟುನಿಟ್ಟಾಗಿ ವಿಧಿಸಲಾಗುತ್ತದೆ ಎಂದರು.

ಗಣೇಶ ವಿಗ್ರಹಕ್ಕೆ ಚಿನ್ನಾಭರಣ ಹಾಕಿದರೆ ನಾವು ಜವಾಬ್ದಾರರಲ್ಲ. ಗಣಪತಿ ಹೆಸರು ಹೇಳಿಕೊಂಡು ಬಲವಂತವಾಗಿ ಚಂದಾ ವಸೂಲಿ ಮಾಡಬಾರದು ಎಂದು ಕಿವಿಮಾತು ಹೇಳಿದರು.

ಆರಕ್ಷಕ ಉಪ ನಿರೀಕ್ಷಕ ಶಿವಾನಂದ ಪಾಟೀಲ್ ಮಾತನಾಡಿ, ಬೇಲೂರು ಪೊಲೀಸ್ ವ್ಯಾಪ್ತಿಯಲ್ಲಿ ಬರುವ 80ಕ್ಕೂ ಹೆಚ್ಚಿನ ಗಣಪತಿ ಪ್ರತಿಷ್ಠಾನೆಗೆ ಹಲವಾರು ಷರತ್ತುಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ, ಸ್ವಯಂ ಸೇವಕರ ನೇಮಕ, ಅನ್ನಪ್ರಸಾದದ ಬಗ್ಗೆ ಆರೋಗ್ಯ ಇಲಾಖೆ ಅನುಮತಿ ಪಡೆಯಬೇಕು ಇಲ್ಲವಾದರೆ ಆಯೋಜಕರ ಮೇಲೆ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಲು ಪೊಲೀಸ್ ಇಲಾಖೆ ಮೀನ ಮೇಷ ಎಣಿಸುವುದಿಲ್ಲ ಎಂದು ಎಚ್ಚರಿಕೆ ನೀಡಿದರು. ಎಎಸ್ಐ ಶೇಖರಪ್ಪ ಹಾಜರಿದ್ದರು.

# ಮಲೆನಾಡು ಪ್ರದೇಶಕ್ಕೆ ವಿಶೇಷ ಪ್ಯಾಕೇಜ್‌ಗೆ ಆಗ್ರಹ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಹೈದರಾಬಾದ್ ಕರ್ನಾಟಕವನ್ನು ಕಲ್ಯಾಣ ಕರ್ನಾಟಕವನ್ನಾಗಿ ಘೋಷಿಸಿ ವಿಶೇಷ ಪ್ಯಾಕೇಜ್ ನೀಡಿದಂತೆ ಮಳೆನಾಡು ಪ್ರದೇಶವನ್ನೂ ಮಲೆನಾಡು ಕರ್ನಾಟಕವೆಂದು ಘೋಷಿಸಿ ಸರ್ಕಾರ ತಕ್ಷಣವೇ ವಿಶೇಷ ಅನುದಾನ ನೀಡಬೇಕು ಎಂದು ಮಾಜಿ ಸಚಿವ ಎಚ್.ಕೆ. ಕುಮಾರಸ್ವಾಮಿ ಆಗ್ರಹಿಸಿದರು.

ಪಟ್ಟಣದ ಹೇಮಾವತಿ ನದಿಗೆ ಬಾಗಿನ ಅರ್ಪಿಸಿ ಮಾತನಾಡಿದ ಅವರು, ಕಳೆದ ಮೂರು ತಿಂಗಳಲ್ಲಿ ಸುರಿದ ಭಾರೀ ಮಳೆಯಿಂದ ಮಲೆನಾಡು ಭಾಗದಲ್ಲಿ ಸುಮಾರು 300 ಟಿಎಂಸಿ ನೀರು ಹರಿದು ಹೋಗಿದೆ. ಈ ಅವಧಿಯಲ್ಲಿ ಸಕಲೇಶಪುರ ಸೇರಿದಂತೆ ಮಲೆನಾಡು ಪ್ರದೇಶವು ಅಪಾರ ನಷ್ಟ ಅನುಭವಿಸಿದೆ. ನೀರಿನ ಲಾಭವನ್ನು ಇತರೆ ಭಾಗದ ಜನರು ಪಡೆಯುತ್ತಿದ್ದರೆ ನಷ್ಟವನ್ನು ಮಾತ್ರ ಮಲೆನಾಡು ಜನತೆ ಭರಿಸುತ್ತಿದ್ದಾರೆ ಎಂದು ವಿಷಾದ ವ್ಯಕ್ತಪಡಿಸಿದರು.

ಕಳೆದ 16 ವರ್ಷಗಳಿಂದಲೂ ಮಲೆನಾಡಿಗೆ ವಿಶೇಷ ಪ್ಯಾಕೇಜ್ ನೀಡಬೇಕೆಂದು ನಿರಂತರವಾಗಿ ಒತ್ತಾಯಿಸುತ್ತಿದ್ದೇನೆ. ಆದರೆ ಆಳುತ್ತಿರುವ ಸರ್ಕಾರಗಳು ಜಾಣ ಮೌನ ವಹಿಸುತ್ತಿವೆ. ಏಳು ಜಿಲ್ಲೆಗಳ ಮಳೆನಾಡು ಭಾಗವನ್ನು ಮಲೆನಾಡು ಕರ್ನಾಟಕವೆಂದು ಘೋಷಿಸಿ, ವಿಶೇಷ ಪ್ಯಾಕೇಜ್ ನೀಡುವುದು ಕಾಲದ ಅವಶ್ಯಕತೆ ಎಂದು ಅವರು ಹೇಳಿದರು.

ಅರಣ್ಯ ಕಾಯ್ದೆಯ ಪರಿಣಾಮವಾಗಿ ನೂರಾರು ವರ್ಷಗಳಿಂದ ಅರಣ್ಯ ಪ್ರದೇಶಗಳಲ್ಲಿ ವಾಸಿಸುತ್ತಿರುವ ರೈತರು, ಬೆಳಗಾರರು, ಬಡವರು ಸಂಕಷ್ಟ ಅನುಭವಿಸುತ್ತಿದ್ದಾರೆ. ಅವರ ಜೀವನಾಧಾರವಾದ ಭೂಮಿ ಅವರದ್ದೇ ಆಗಬೇಕು. ನ್ಯಾಯಾಲಯವೂ ಇದನ್ನು ಒಪ್ಪುವ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ಜನರನ್ನು ಒಕ್ಕಲಿಸಲು ಮುಂದಾಗಬಾರದು. ಮಾನವೀಯ ದೃಷ್ಟಿಯಿಂದ ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಅವರು ಒತ್ತಾಯಿಸಿದರು.

# ಹೊಳೆನರಸೀಪುರಕ್ಕೆ ಜಿಲ್ಲಾಧಿಕಾರಿ ಲತಾಕುಮಾರಿ ಭೇಟಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹೊಳೆನರಸೀಪುರ: ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಮಂಗಳವಾರ ತಾಲ್ಲೂಕಿಗೆ ಭೇಟಿ ನೀಡಿ ಸಾರ್ವಜನಿಕರ ಸಮಸ್ಯೆ ಆಲಿಸಿದರು.

ಲಕ್ಷ್ಮಿ ನರಸಿಂಹ ಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿ ಸುದ್ದಿಗಾರರೊಂದಿಗೆ ಮಾತನಾಡಿ, ಜಿಲ್ಲೆಯ ಎಲ್ಲಾ ತಾಲ್ಲೂಕು ಕೇಂದ್ರಗಳಿಗೆ ಭೇಟಿ ನೀಡಿ ಸಾರ್ವಜನಿಕರ ಸಮಸ್ಯೆ ಖುದ್ದಾಗಿ ಅರಿತು ಪರಿಹಾರ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಎಲ್ಲಾ ಕಡೆ ಸಮಸ್ಯೆ ಇದ್ದೇ ಇರುತ್ತದೆ. ನಮ್ಮ ಅವಧಿಯಲ್ಲಿ ಸಾಧ್ಯವಾದಷ್ಟು ಪರಿಹಾರಕ್ಕೆ ಪ್ರಯತ್ನಿಸಲಾಗುವುದು. ಹೇಮಾವತಿ ನದಿಗೆ ಕಲುಷಿತ ನೀರು ಸೇರುತ್ತಿದೆ. ಮುಸ್ಲಿಂ ಬಡಾವಣೆಯ ಯಾಸೀನ್ ನಗರ ಮಳೆಗಾಲದಲ್ಲಿ ನದಿ ತುಂಬಿ ಮನೆಗಳು ಮುಳುಗುತ್ತವೆ ಎಂಬುದರ ಕುರಿತು ಮಾಹಿತಿ ಇದೆ. ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ಮಕ್ಕಳ ತಜ್ಞರಿಲ್ಲ. ತಾಯಿ ಮತ್ತು ಮಕ್ಕಳ ಆಸ್ಪತ್ರೆಗೆ ಒಬ್ಬರೇ ಪ್ರಸೂತಿ ತಜ್ಞರಿದ್ದಾರೆ. ಆರೋಗ್ಯ ಹಿತದೃಷ್ಟಿಯಿಂದ ಹೆಚ್ಚುವರಿ ವೈದ್ಯರ ನೇಮಕಕ್ಕೆ ಕ್ರಮ ಕೈಗೊಳ್ಳಲಾಗುವುದು ಎಂದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹೆಚ್.ಟಿ. ಲಕ್ಷ್ಮಣ್, ಬಾಗೀವಾಳು ಮಂಜುನಾಥ್ ಹಾಗೂ ಸಾಮಾಜಿಕ ಕಾರ್ಯಕರ್ತ ಮುತ್ತುರಾಜ್ ಮಾತನಾಡಿ, ರಸ್ತೆಗೆ ಅಡ್ಡಲಾಗಿ ಗಣಪತಿ ಪೆಂಡಾಲ್ ಹಾಕಲಾಗಿದೆ. ಅದರಿಂದ ಸಾರ್ವಜನಿಕ ಸಂಚಾರಕ್ಕೆ ತೊಂದರೆಯಾಗುತ್ತಿದೆ. ಈ ಬಗ್ಗೆ ಪ್ರತಿ ವರ್ಷ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲವೆಂದು ಜಿಲ್ಲಾಧಿಕಾರಿ ಗಮನಕ್ಕೆ ತಂದರು.

ಸೂಕ್ತ ದಾಖಲೆಗಳೊಂದಿಗೆ ವಿವರ ಒದಗಿಸುವಂತೆ ತಹಶೀಲ್ದಾರ್ ಮತ್ತು ಪುರಸಭಾ ಮುಖ್ಯಾಧಿಕಾರಿಗೆ ಜಿಲ್ಲಾಧಿಕಾರಿ ಸೂಚಿಸಿದರು.

ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರು ಹಂಗರಹಳ್ಳಿ ಪ್ರಾಥಮಿಕ ಶಾಲೆಗೆ ಭೇಟಿ ನೀಡಿ, ಪೂರ್ವ ಪ್ರಾಥಮಿಕ ಶಾಲೆಯನ್ನು ಗ್ರಾಮದ ಮುಖಂಡರು ದತ್ತು ಪಡೆದು ಸವಲತ್ತು ಒದಗಿಸಿಕೊಟ್ಟಿರುವ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ತಹಶೀಲ್ದಾರ್ ವೈ.ಎಂ. ರೇಣುಕುಮಾರ್, ಪುರಸಭಾ ಮುಖ್ಯಾಧಿಕಾರಿ ಶಿವಶಂಕರ್ ಮತ್ತಿತರರಿದ್ದರು.

# ಮಾಸ್ಟರ್ ಪ್ಲಾನ್ ಬಗ್ಗೆ ಶಾಸಕರು ಚರ್ಚೆ ನಡೆಸಿಲ್ಲ: ಆರೋಪ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಅರಕಲಗೂಡು: ಪಟ್ಟಣದ ಸಮಗ್ರ ಅಭಿವೃದ್ಧಿ ಸಂಬಂಧ ತಯಾರಿಸಿರುವ ಮಾಸ್ಟರ್ ಪ್ಲಾನ್ ಸಂಬಂಧ ಶಾಸಕ ಎ. ಮಂಜು ಪಟ್ಟಣ ಪಂಚಾಯಿತಿಯೊಂದಿಗೆ ಒಂದು ಬಾರಿಯೂ ಚರ್ಚಿಸಿಲ್ಲ ಎಂದು ಪಪಂ ಅಧ್ಯಕ್ಷ ಪ್ರದೀಪ್‌ಕುಮಾರ್ ಆರೋಪಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸ್ಥಳೀಯ ಯೋಜನಾ ಪ್ರಾಧಿಕಾರ ರೂಪಿಸುವ ಯೋಜನೆ ಕುರಿತು, ಕ್ಷೇತ್ರದ ಶಾಸಕರು, ಸಂಸದರು ಮತ್ತು ಪಪಂ ಆಡಳಿತ ಮಂಡಳಿಯನ್ನು ಒಳಗೊಂಡಂತೆ ಸಭೆ ಆಯೋಜನೆ ಮಾಡಿ 2041ರ ಪ್ಲಾನ್ ಕುರಿತು ಸಲಹೆ ಸೂಚನೆ ಪಡೆಬೇಕಿತ್ತು. ಅಲ್ಲದೆ ಪಪಂ ಎಲ್ಲಾ ಸದಸ್ಯರ ಒಮ್ಮತದ ಮೇರೆಗೆ ನಾಮನಿರ್ದೇಶನಗೊಂಡಿರುವ ಸದಸ್ಯ ಅನಿಕೇತನ್ ಅವರನ್ನು ಸಹ ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿಲ್ಲ. ಈ ಕುರಿತು ಪಪಂ ವತಿಯಿಂದ ಶಾಸಕರ ಅಧ್ಯಕ್ಷತೆಯಲ್ಲಿ 2041ರ ಪ್ಲಾನ್ ಕುರಿತ ವಿಷಯಗಳನ್ನು ಜನಸಾಮಾನ್ಯರಿಗೆ ಮತ್ತು ಕೃಷಿ ಭೂಮಿಯನ್ನು ಹೊಂದಿರುವ ರೈತರನ್ನೊಳಗೊಂಡಂತೆ ಸಭೆಯನ್ನು ಆಯೋಜನೆ ಮಾಡಲು ಉದ್ದೇಶಿಸಲಾಗಿದೆ ಎಂದು ಹೇಳಿದರು.

ರಾಜ್ಯದಲ್ಲಿ ನಮ್ಮ ಕಾಂಗ್ರೆಸ್ ಸರಕಾರ ಅಧಿಕಾರದಲ್ಲಿದೆ. ಈ ಹಿನ್ನೆಲೆ ಕಾಂಗ್ರೆಸ್ ಪಕ್ಷ ನಾಮನಿರ್ದೇಶನ ಮಾಡಿರುವ ಅಧ್ಯಕ್ಷರು, ಸದಸ್ಯರನ್ನು ಸ್ಥಳೀಯ ಯೋಜನಾ ಪ್ರಾಧಿಕಾರಕ್ಕೆ ನೇಮಕ ಮಾಡಲಾಗಿದೆ. ಅಲ್ಲದೆ ಅಧಿಕಾರಿ, ಎಂಜಿನಿಯರ್ ಕಾರ್ಯನಿರ್ವಹಿಸುತ್ತಿದ್ದಾರೆ.

ಪಟ್ಟಣದ ಜನತೆಯ ಹಿತ ದೃಷ್ಠಿಯಿಂದ ನ್ಯಾಯಾಯುತವಾದ ಸಮಜಾಯಿಸಿ ಉತ್ತರ ನೀಡುವ ಗುರುತರ ಜವಾಬ್ದಾರಿ ಯೋಜನಾ ಪ್ರಾಧಿಕಾರಕ್ಕೆ ಇದೆ. ಈ ನಿಟ್ಟಿನಲ್ಲಿ ಕೆಲಸ ಮಾಡಬೇಕೆಂದು ಅವರು ಒತ್ತಾಯಿಸಿದರು.

ಸ್ಥಳೀಯ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಗುರುಮೂರ್ತಿ ಮತ್ತು ಅಧಿಕಾರಿ ಪುನೀತ್ ಅವರು ಯೋಜನಾ ಪ್ರಾಧಿಕಾರವನ್ನು ಸೀಮಿತಗೊಳಿಸಿಕೊಂಡು ಅಧಿಕಾರವನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ. ಈಗ ಸಿದ್ದಗೊಂಡಿರುವ ಪ್ಲಾನ್ ಬಗ್ಗೆಯೂ ಕೂಡ ಯಾವುದೇ ಸದಸ್ಯರುಗಳ ಗಮನಕ್ಕೆ ತರದೇ ಅಂತಿಮಗೊಳಿಸುವ ಹಂತಕ್ಕೆ ಹೋಗಿರುವುದು ಕಂಡುಬಂದಿದೆ ಎಂದು ಯೋಜನಾ ಪ್ರಾಧಿಕಾರದ ನಾಮನಿರ್ದೇಶನ ಸದಸ್ಯರೂ ಆದ ಪಪಂ ಸದಸ್ಯ ಅನಿಕೇತನ್ ಆರೋಪಿಸಿದರು.

ಕ್ಷೇತ್ರದ ಶಾಸಕರು, ಪಪಂ ಆಡಳಿತವನ್ನು ಕಡೆಗಣಿಸಿ ಪ್ರಾಧಿಕಾರಕ್ಕೆ ಸಂಬಂಧವಿಲ್ಲದ ಕಾಂಗ್ರೆಸ್ ಪರಾಜಿತ ಅಭ್ಯರ್ಥಿ ಶ್ರೀಧರ್‌ಗೌಡರ ಅಣತಿಯಂತೆ ಪ್ರಾಧಿಕಾರದ ಆಡಳಿತ ಮಂಡಳಿ ಕೆಲಸ ನಿರ್ವಹಿಸುತ್ತಿದೆ.

ಕ್ಷೇತ್ರದ ಶಾಸಕರಾದ ಎ. ಮಂಜು ಅವರು ಪ್ಲಾನ್‌ನ ಲೋಪ, ದುರುಪಯೋಗ ಕುರಿತು ಜನ ಸಾಮಾನ್ಯರಿಗೆ ತಿಳಿವಳಿಕೆ ನೀಡುವುದು ಅವರ ಕರ್ತವ್ಯವಾಗಿದೆ ಎಂದರು.

# ಬದುಕಿನಲ್ಲಿ ಸಹೋದರ ಬಾಂಧವ್ಯ ಮಹತ್ವದ್ದು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಸಹೋದರತೆ ಸಂಬಂಧಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ ಎಂದು ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ಕುಸುಮ ಬಾಲಕೃಷ್ಣ ಹೇಳಿದರು.

ಪಟ್ಟಣದ ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಇನ್ನರ್ ವೀಲ್ ಹಾಗೂ ಕಲಾ ಪರಿವಾರದ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ರಕ್ಷಾ ಬಂಧನ ಕಾರ್ಯಕ್ರಮದಲ್ಲಿ ಮಾತನಾಡಿ, ಜೀವನ ಎಂಬ ಚಕ್ರ ಉರುಳಿದಂತೆಲ್ಲ ಸಂಬಂಧಗಳ ಸಂಕೋಲೆ ಬೆಳೆಯುತ್ತಾ ಸಾಗುತ್ತದೆ ಎಂದರು.

ಇಲ್ಲಿ ಹುಟ್ಟು-ಸಾವು ಖಚಿತವಾಗಿದ್ದು ಈ ಭೂಮಿಯ ಮೇಲೆ ಯಾರೂ ಸಹ ಶಾಶ್ವತವಾಗಿ ಬದುಕುಳಿಯಲು ಸಾಧ್ಯವಿಲ್ಲ. ಆದ್ದರಿಂದ ಇರುವವರೆಗೂ ಸಹಬಾಳ್ವೆಯಿಂದ ಬದುಕೋಣ ಎಂದು ತಿಳಿಸಿದರು.

ರಕ್ತ ಹಂಚಿಕೊಂಡು ಹುಟ್ಟಿದರಷ್ಟೇ ಮಾತ್ರ ಅಣ್ಣ-ತಮ್ಮಂದಿರು ಅಥವಾ ಸಹೋದರರಲ್ಲ. ಹೆಜ್ಜೆ ಇರಿಸಿದಂತೆಲ್ಲ ಜೊತೆಯಾಗಿ ಸಿಗುವ ಪ್ರತಿಯೊಬ್ಬರೂ ಒಡಹುಟ್ಟಿದವರಷ್ಟೇ ಸಮ. ಒಳ್ಳೆಯ ಮನಸ್ಸು , ಮಾತು ಹಾಗೂ ನಡೆಯುವ ಮಾರ್ಗ ಸರಿ ಇದ್ದರೆ ಸಮಾಜವು ಪ್ರಗತಿ ಕಾಣಲಿದೆ. ಎಲ್ಲರೂ ಒಗ್ಗೂಡಿ ನಡೆಯೋಣ ಎಂದು ಕರೆ ನೀಡಿದರು.

ಇನ್ನರ್ ವೀಲ್ ಹಾಗೂ ಕಲಾ ಪರಿವಾರದ ಸದಸ್ಯರು ಪತ್ರಕರ್ತರಿಗೆ ರಕ್ಷಾ ಬಂಧನ (ರಾಖಿ) ಕಟ್ಟಿ ಸಿಹಿ ನೀಡಿ ಆರತಿ ಬೆಳಗಿದರು.

# ವಿಶ್ವ ಛಾಯಾಗ್ರಾಹಕರ ದಿನ ರೋಗಿಗಳಿಗೆ ಹಣ್ಣು ಹಂಪಲು ವಿತರಣೆ




ಸಕಲೇಶಪುರ: ವಿಶ್ವ ಛಾಯಾಗ್ರಾಹಕರ ದಿನದ ಪ್ರಯುಕ್ತ ಸಕಲೇಶಪುರ ತಾಲ್ಲೂಕು ವೃತ್ತಿನಿರತ ಛಾಯಾಗ್ರಹಕರ ಸಂಘದಿಂದ ಮಾನವೀಯ ಸೇವೆಯ ಉದಾತ್ತ ಕಾರ್ಯ ನಡೆದಿದೆ.

ಕ್ರಾಫರ್ಡ್ ಆಸ್ಪತ್ರೆಯ ಒಳರೋಗಿಗಳಿಗೆ ಹಣ್ಣು ಹಂಪಲು ವಿತರಿಸುವ ಮೂಲಕ ಛಾಯಾಗ್ರಾಹಕರು ದಿನದ ಮಹತ್ವವನ್ನು ಅರ್ಥಪೂರ್ಣವಾಗಿ ಆಚರಿಸಿದರು. ಸಂಘದ ಅಧ್ಯಕ್ಷ ವಿನು ಹಲಸುಲಿಗೆ, ಉಪಾಧ್ಯಕ್ಷ ನಾಗೇಶ್, ಕಾರ್ಯದರ್ಶಿ ರಘು, ಖಜಾಂಚಿ ಸಾಧಿಕ್ ಸೇರಿದಂತೆ ಮಧು, ಜಾನೆಕೆರೆ ಪರಮೇಶ್, ಅರೆಕೆರೆ ಪ್ರಕಾಶ್, ಶ್ರೀನಿವಾಸ್, ಹೆತ್ತೂರು ಮಧು, ವಸಂತ್ ಕುಮಾರ್, ರವಿರಾಜ್, ಬ್ಯಾಕರವಳ್ಳಿ ಚಂದ್ರು, ರಾಜು, ಸುನಿಲ್, ಪ್ರದೀಪ್, ಜಶ್ವಂತ್, ಸುದೀಶ್, ಹರ್ಷ, ಬೈಕೆರೆ ನಾಗೇಶ್, ಕೃಷ್ಣ ಮತ್ತಿತರರು ಭಾಗವಹಿಸಿದ್ದರು. ಆಸ್ಪತ್ರೆಯ ಒಳರೋಗಿಗಳಿಗೆ ಹಣ್ಣು ಹಂಪಲು ಹಂಚುವ ಮೂಲಕ ರೋಗಿಗಳ ಮನೋಬಲವನ್ನು ಹೆಚ್ಚಿಸುವುದು ಹಾಗೂ ಸಮಾಜಮುಖಿ ಚಟುವಟಿಕೆಯಲ್ಲಿ ತೊಡಗುವ ಮೂಲಕ ಛಾಯಾಗ್ರಾಹಕರು ತಮ್ಮ ಸಾಮಾಜಿಕ ಜವಾಬ್ದಾರಿಯನ್ನು ತೋರಿಸಿದ್ದಾರೆ ಎಂದು ಸಂಘದ ಮುಖಂಡರು ಅಭಿಪ್ರಾಯಪಟ್ಟರು.

ವಿಶ್ವ ಛಾಯಾಗ್ರಾಹಕರ ದಿನವನ್ನು ಕೇವಲ ಆಚರಣೆ ಮಾಡುವುದಲ್ಲದೆ, ಅದನ್ನು ಸಮಾಜಮುಖಿ ಕಾರ್ಯಗಳ ಮೂಲಕ ಅರ್ಥಪೂರ್ಣಗೊಳಿಸಿದ ಸಕಲೇಶಪುರ ಛಾಯಾಗ್ರಾಹಕರ ಈ ಸೇವಾ ಕಾರ್ಯ ಸ್ಥಳೀಯರಿಂದ ಮೆಚ್ಚುಗೆಗೆ ಪಾತ್ರವಾಗಿದೆ.

# ಹಾರನಹಳ್ಳಿಯಲ್ಲಿ ಪಶು ಆರೋಗ್ಯ ಶಿಬಿರ



ಹಾಸನ: ಕಾರೆಕೆರೆ ಕೃಷಿ ಮಹಾವಿದ್ಯಾಲಯದ ಅಂತಿಮ ವರ್ಷದ ಬಿಎಸ್‌ಸಿ ವಿದ್ಯಾರ್ಥಿಗಳು ಹಾರನಹಳ್ಳಿ ಗ್ರಾಮದಲ್ಲಿ ಹಮ್ಮಿಕೊಂಡಿರುವ ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರದ ಅಂಗವಾಗಿ ಉಚಿತ ಪಶು ಆರೋಗ್ಯ ಶಿಬಿರ ನೆರವೇರಿತು.

ಶಿಬಿರದಲ್ಲಿ ಸ್ನಾತಕೋತ್ತರ ಮತ್ತು ಅಂತಿಮ ವರ್ಷದ ಪಶುವೈದ್ಯಕೀಯ ವಿದ್ಯಾರ್ಥಿಗಳು ಪಾಲ್ಗೊಂಡು ಪಶು ಆರೋಗ್ಯ ಸೇವೆ ನೀಡಿದರು. ಕೃಷಿ ಮಹಾವಿದ್ಯಾಲಯ ಡೀನ್ ಡಾ. ಮುನಿಸ್ವಾಮಿ ಗೌಡ, ಸಂಯೋಜಕ ಡಾ. ಎಂ.ಹೆಚ್. ಶಂಕರ, ಡಾ. ಎಸ್.ಎ. ವೇಣು ಡಾ. ನಾಗರಾಜ ಮತ್ತು ಡಾ. ಶಿವಕುಮಾರ ಭಾಗವಹಿಸಿದ್ದರು.

# ಸಾರ್ವಜನಿಕರ ಸಂಚಾರಕ್ಕೆ ಸಂಚಕಾರ ತರುತ್ತಿರುವ ಬಿಡಾಡಿ ದನಗಳು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಅರಸೀಕೆರೆ: ನಗರದಲ್ಲಿ ಬಿಡಾಡಿ ದನಗಳ ಹಾವಳಿ ಮಿತಿ ಮೀರಿದ್ದು ಸಾರ್ವಜನಿಕ ಸಂಚಾರಕ್ಕೆ ಭಾರೀ ಅಡಚಣೆಯಾಗಿದೆ.

ರಸ್ತೆಯಲ್ಲಿ ಸಂಚರಿಸುವ ವಾಹನ ಸವಾರರಿಗೆ ಕಿರಿಕಿರಿ ನೀಡುವ ಬೀಡಾಡಿ ದನಗಳು ತಮ್ಮ ಪ್ರಾಣಕ್ಕೂ ಸಹ ಸಂಚಕಾರ ತಂದುಕೊಳ್ಳುತ್ತಿರುವ ಪ್ರಕರಣ ಹೆಚ್ಚುತ್ತಿವೆ. ನಗರದ ಮೂಲಕ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿ 206 ಟಿಎಚ್ ರಸ್ತೆ ಪಿಪಿ ವೃತ್ತದ ಸಮೀಪ ಮಂಗಳವಾರ ಬೆಳಿಗ್ಗೆ ಹೆದ್ದಾರಿಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದ ಬಿಡಾಡಿ ದನ ರಸ್ತೆಯಲ್ಲಿ ಸಾಗುವ ವಾಹನಕ್ಕೆ ಸಿಕ್ಕಿಹಾಕಿಕೊಂಡ ಪರಿಣಾಮ ತನ್ನ ಕಾಲು ಕಳೆದುಕೊಂಡು ನರಳಾಡುತ್ತಿದ್ದ ದೃಶ್ಯ ಕಂಡುಬಂತು.

ಬಿಡಾಡಿ ದನ ಹಾಗೂ ವಾಹನ ಸವಾರ ನಡುವೆ ನಿತ್ಯ ನಡೆಯುತ್ತಿರುವ ಕಾದಾಟಕ್ಕೆ ಪರಿಹಾರ ಕಂಡುಕೊಳ್ಳಲು ನಗರಸಭೆ ಕ್ರಮ ಕೈಗೊಳ್ಳದೇ ಇರುವುದು ಸಾರ್ವಜನಿಕರ ಅಸಮಾಧಾನಕ್ಕೆ ಕಾರಣವಾಗಿದೆ. ಅಡ್ಡಾದಿಡ್ಡಿ ರಸ್ತೆಯಲ್ಲಿ ಕಾಣಿಸಿಕೊಳ್ಳುವ ಬಿಡಾಡಿ ದನಗಳು ಅಪಘಾತಕ್ಕೆ ಕಾರಣವಾಗುತ್ತಿದ್ದು ವಾಹನ ಸವಾರರು ಅಷ್ಟೇ ಅಲ್ಲ ತಮ್ಮ ಸಾವು ನೋವಿಗೂ ಮೂಕ ಪ್ರಾಣಿಗಳು ತುತ್ತಾಗುತ್ತಿರುವುದು ವಿಷಾದದ ಸಂಗತಿಯಾಗಿದೆ.

ನಗರದಲ್ಲಿ ನೂರಾರು ದನಗಳು ಮನಸೋ ಇಚ್ಛೆ ಓಡಾಡಿಕೊಂಡಿವೆ. ಇವು ಬಿಡಾಡಿ ದನಗಳಲ್ಲ ಬಹುತೇಕ ದನಗಳಿಗೆ ಮಾಲೀಕರಿದ್ದಾರೆ. ಸಣ್ಣ ಕರುಗಳನ್ನು ತಂದು ರಸ್ತೆಯಲ್ಲಿ ಬಿಟ್ಟು ಬೆಳೆಸಿ ಅವು ದೊಡ್ಡದಾಗಿ ಬೆಳೆದ ಬಳಿಕ ವ್ಯವಸ್ಥಿತವಾಗಿ ಕಸಾಯಿ ಖಾನೆ ಪಾಲಾಗುತ್ತಿವೆ. ಇದನ್ನು ಕಂಡು ಕಾಣದಂತೆ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ನಡೆದುಕೊಳ್ಳುತ್ತಿರುವುದರಿಂದ ಈ ರೀತಿ ಬಿಡಾಡಿ ದನಗಳು ಹೆಚ್ಚಾಗಲು ಕಾರಣವಾಗಿದೆಯಲ್ಲದೆ ರಸ್ತೆಯಲ್ಲಿ ಅಪಘಾತಗಳು ಸಂಭವಿಸಿ ಮನುಷ್ಯ ಹಾಗೂ ಮೂಕ ಪ್ರಾಣಿಗಳ ಸಾವು ನೋವಿಗೆ ಕಾರಣವಾಗುತ್ತಿರುವುದು ನೋವಿನ ಸಂಗತಿ ಎನ್ನುತ್ತಾರೆ ಹಿರಿಯ ವಕೀಲ ಹಿರಣ್ಣಯ್ಯ.

> ನಗರ ವ್ಯಾಪ್ತಿಯಲ್ಲಿ ಹಾದು ಹೋಗಿರುವ ರಾಜ್ಯ ಹಾಗೂ ರಾಷ್ಟ್ರೀಯ ಹೆದ್ದಾರಿಯಲ್ಲಿ ಬಿಡಾಡಿ ದನಗಳು ಮತ್ತು ಬೀದಿ ನಾಯಿಗಳು ಅಡ್ಡಾದಿಡ್ಡಿಯಾಗಿ ಓಡಾಡುವುದನ್ನು ತಡೆಯಲು ಒಂದು ಕೋಟಿ ರೂ. ವೆಚ್ಚದಲ್ಲಿ ರಸ್ತೆ ವಿಭಜಕದ ಮಧ್ಯೆ ಬ್ಯಾರಿಕೇಡ್ ಅಳವಡಿಸಲು ಕ್ರಮ ಕೈಗೊಳ್ಳಲಾಗಿದೆ.
>
> – ಎಂ. ಸಮೀವುಲ್ಲಾ, ನಗರಸಭೆ ಅಧ್ಯಕ್ಷ

# ಹಾಸನದ ಸ್ಕಾಲರ್ಸ್ ಶಾಲೆ: ಹಸಿರುಮಯ ಆವರಣದಲ್ಲಿ ಶಿಕ್ಷಣದ ಝರಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಇಂದಿನ ಶಿಕ್ಷಣವೆಂದರೆ ಕೇವಲ ಪುಸ್ತಕದ ಜ್ಞಾನವಲ್ಲ. ಇದು ವ್ಯಕ್ತಿತ್ವದ ಸರ್ವಾಂಗೀಣ ಬೆಳವಣಿಗೆ, ಶಿಸ್ತು, ನೈತಿಕ ಮೌಲ್ಯಗಳು, ಸಾಮಾಜಿಕ ಹೊಣೆಗಾರಿಕೆ, ಮತ್ತು ಸಾಂಸ್ಕೃತಿಕ ಜಾಗೃತಿಯ ಸಂಗಮ. ಈ ದೃಷ್ಟಿಕೋನದೊಂದಿಗೆ ಹಾಸನದ ಮಹಾಲಕ್ಷ್ಮಿ ಬಡಾವಣೆಯಲ್ಲಿ ಪುಟ್ಟು ಶಿಕ್ಷಣ ಟ್ರಸ್ಟ್‌ನಡಿ ಸ್ಥಾಪಿತವಾದ ಸ್ಕಾಲರ್ಸ್ ಶಾಲೆ, ಕಳೆದ 14 ವರ್ಷಗಳಿಂದ ಗುಣಮಟ್ಟದ ಶಿಕ್ಷಣದ ದೀವಿಗೆಯಾಗಿ ಮಿಂಚುತ್ತಿದೆ. ಇಟಾಲಿಯ ಶೈಲಿಯ ಆಕರ್ಷಕ ಕಟ್ಟಡ ವಿನ್ಯಾಸ, ಹಸಿರಿನಿಂದ ಕೂಡಿದ ವಿಶಾಲ ಆವರಣ, ವಿಶಾಲವಾದ ಕ್ರೀಡಾಂಗಣ ಮತ್ತು ಪ್ರಕೃತಿಯೊಂದಿಗೆ ಸಾಮರಸ್ಯದಿಂದ ಬೆರೆತಿರುವ ವಾತಾವರಣ ಇವೆಲ್ಲವೂ ಮಕ್ಕಳಿಗೆ ಕಲಿಕೆಯ ಜೊತೆಗೆ ಪ್ರಕೃತಿಯ ಸಾಮೀಪ್ಯವನ್ನು ಒದಗಿಸುತ್ತವೆ.

### ದೀರ್ಘ ದೃಷ್ಟಿಯಿಂದ ಕೂಡಿದ ಶಿಕ್ಷಣದ ದಾರಿದೀಪ

ಸಂಸ್ಥಾಪಕ ಅಧ್ಯಕ್ಷ ಡಾ. ಎಚ್.ಎನ್. ಚಂದ್ರಶೇಖರ್ ಮತ್ತು ಕಾರ್ಯದರ್ಶಿ ಶ್ರೀಮತಿ ಮಮತಾ ಚಂದ್ರಶೇಖರ್ ಅವರ ದೂರದೃಷ್ಟಿ, ಶ್ರಮ, ಮತ್ತು ಶಿಕ್ಷಣದ ಪ್ರತಿ ಸಮಗ್ರತೆಯ ಕಡೆಗಿನ ಬದ್ಧತೆಯಿಂದ ಈ ಶಾಲೆ ಶೈಕ್ಷಣಿಕ ಕ್ಷೇತ್ರದಲ್ಲಿ ಒಂದು ಮಾದರಿಯಾಗಿ ಗುರುತಿಸಲ್ಪಟ್ಟಿದೆ. ರಾಜ್ಯದ ವಿವಿಧ ಜಿಲ್ಲೆಗಳಿಂದ ಮತ್ತು ಇತರ ರಾಜ್ಯಗಳಿಂದ ಬಂದಿರುವ ಶಿಕ್ಷಣ ತಜ್ಞರಾದ ಬೋಧಕರು ಇಲ್ಲಿನ ಬಲವಾದ ಆಧಾರಸ್ತಂಭ. ಈ ಶಿಕ್ಷಕರು ತಮ್ಮ ವಿಷಯದಲ್ಲಿ ಪರಿಣತಿಯನ್ನು ತೋರಿಸುವುದರ ಜೊತೆಗೆ ಮಕ್ಕಳಲ್ಲಿ ಕಲಿಕೆಯ ಕುತೂಹಲವನ್ನು ಉತ್ತೇಜಿಸುತ್ತಾರೆ.

### ಆಧುನಿಕ ಸೌಲಭ್ಯಗಳೊಂದಿಗೆ ಸಂಪೂರ್ಣ ಕಲಿಕೆ

ಸ್ಕಾಲರ್ಸ್ ಶಾಲೆಯ ತರಗತಿ ಕೊಠಡಿಗಳು ವಿಶಾಲ, ಪ್ರಕಾಶಮಾನ ಮತ್ತು ಆಧುನಿಕವಾಗಿವೆ. ಇದು ಕಲಿಕೆಗೆ ಉತ್ಸಾಹದಾಯಕ ವಾತಾವರಣ ಸೃಷ್ಟಿಸುತ್ತದೆ. ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ, ಮತ್ತು ಗಣಕಯಂತ್ರ ವಿಜ್ಞಾನಕ್ಕೆ ಸಂಬಂಧಿಸಿದ ಪ್ರತ್ಯೇಕ ಪ್ರಯೋಗಾಲಯಗಳು ವಿದ್ಯಾರ್ಥಿಗಳ ಕುತೂಹಲವನ್ನು ಪೋಷಿಸುತ್ತವೆ. ಮಾಂಟೆಸರಿಯಿಂದ ಪ್ರೌಢಶಾಲಾ ಶಿಕ್ಷಣದವರೆಗಿನ ಸಂಪೂರ್ಣ ಶಿಕ್ಷಣ ವ್ಯವಸ್ಥೆಯು ಪೋಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಒಂದೇ ಸೂರಿನಡಿ ಸತತ ಕಲಿಕೆಯ ಅವಕಾಶವನ್ನು ಒದಗಿಸುತ್ತದೆ. ಈ ಶೈಕ್ಷಣಿಕ ವರ್ಷದಿಂದ ಪಿಯು ಕಾಲೇಜಿನ ಆರಂಭವೂ ಶಾಲೆಯ ಮತ್ತೊಂದು ಮೈಲಿಗಲ್ಲಾಗಿದೆ.

### ಸುರಕ್ಷತೆಯೊಂದಿಗೆ ಆರಾಮದಾಯಕ ಕಲಿಕೆ

ವಿದ್ಯಾರ್ಥಿಗಳ ಸುರಕ್ಷತೆಗೆ ಶಾಲೆಯು ಅತ್ಯಂತ ಆದ್ಯತೆ ನೀಡಿದೆ. ಸಿಎನ್



ಸಿಟಿವಿ ಕ್ಯಾಮೆರಾಗಳು, ಜಿಪಿಎಸ್ ತಂತ್ರಜ್ಞಾನದಿಂದ ಕೂಡಿದ ಸಾರಿಗೆ ವಾಹನಗಳು ಮತ್ತು ಆಧುನಿಕ ಸುರಕ್ಷಾ ವ್ಯವಸ್ಥೆಗಳು ಪೋಷಕರಲ್ಲಿ ವಿಶ್ವಾಸವನ್ನು ತುಂಬಿವೆ. ಈ ಎಲ್ಲಾ ಸೌಲಭ್ಯಗಳು ಶಾಲೆಯನ್ನು ವಿದ್ಯಾರ್ಥಿಗಳಿಗೆ ಒಂದು ಸುರಕ್ಷಿತ ಆಶ್ರಯದಂತೆ ಮಾಡಿವೆ.

### ಪಠ್ಯೇತರ ಚಟುವಟಿಕೆಗಳ ಮೂಲಕ ಸಂಪೂರ್ಣ ಬೆಳವಣಿಗೆ

ಸ್ಕಾಲರ್ಸ್ ಶಾಲೆ ಕೇವಲ ಪಾಠಪುಸ್ತಕದ ಶಿಕ್ಷಣಕ್ಕೆ ಸೀಮಿತವಾಗಿಲ್ಲ. ಕ್ರೀಡೆ, ಸಂಗೀತ, ನೃತ್ಯ, ನಾಟಕ, ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಸಮಾನ ಒತ್ತು ನೀಡುವ ಮೂಲಕ ವಿದ್ಯಾರ್ಥಿಗಳ ಸಮಗ್ರ ವಿಕಾಸಕ್ಕೆ ಶಾಲೆ ಬದ್ಧವಾಗಿದೆ. ವಾರ್ಷಿಕ ಕ್ರೀಡಾಕೂಟಗಳು ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ, ತಂಡಭಾವನೆ, ಮತ್ತು ನಾಯಕತ್ವ ಗುಣಗಳನ್ನು ಬೆಳೆಸುತ್ತವೆ. ಸ್ವಾತಂತ್ರ್ಯ ದಿನ, ಗಣರಾಜ್ಯೋತ್ಸವ, ಶಿಕ್ಷಕರ ದಿನಾಚರಣೆಯಂತಹ ರಾಷ್ಟ್ರೀಯ ಹಬ್ಬಗಳ ಜೊತೆಗೆ ದೀಪಾವಳಿ, ಕ್ರಿಸ್‌ಮಸ್, ಮೊಹರಂ, ಹೋಳಿ ಮುಂತಾದ ಧಾರ್ಮಿಕ ಹಬ್ಬಗಳನ್ನು ಸಂಭ್ರಮದಿಂದ ಆಚರಿಸುವುದರಿಂದ ಮಕ್ಕಳಲ್ಲಿ ಸಹಬಾಳ್ವೆ, ಸಮಾನತೆ, ಮತ್ತು ಧಾರ್ಮಿಕ ಸಹಿಷ್ಣುತೆಯ ಮೌಲ್ಯಗಳು ಬಾಲ್ಯದಿಂದಲೇ ಬೇರೂರಿವೆ.

### ಶೈಕ್ಷಣಿಕ ಪ್ರವಾಸ: ಜ್ಞಾನದ ನೈಜ ಅನುಭವ

ಪ್ರತಿವರ್ಷ ಆಯೋಜಿಸಲಾಗುವ ಶೈಕ್ಷಣಿಕ ಪ್ರವಾಸಗಳು ವಿದ್ಯಾರ್ಥಿಗಳಿಗೆ ಪುಸ್ತಕದ ಜ್ಞಾನವನ್ನು ನೈಜ ಜಗತ್ತಿನೊಂದಿಗೆ ಸಂಯೋಜಿಸುವ ಅವಕಾಶವನ್ನು ನೀಡುತ್ತವೆ. ಇದರಿಂದ ಕಲಿಕೆಯು ಕೇವಲ ಸೈದ್ಧಾಂತಿಕವಾಗದೆ, ಅನುಭವಾತ್ಮಕವಾಗಿಯೂ ರೂಪಗೊಳ್ಳುತ್ತದೆ.

### ಸಾಧನೆಯ ಹೆಮ್ಮೆಯ ಪಯಣ

ಕಳೆದ 14 ವರ್ಷಗಳಲ್ಲಿ ಸ್ಕಾಲರ್ಸ್ ಶಾಲೆಯ ವಿದ್ಯಾರ್ಥಿಗಳು ಶಿಕ್ಷಣ, ಕ್ರೀಡೆ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿದ್ದಾರೆ. ಈ ಸಾಧನೆಗಳು ಶಾಲೆಯ ಖ್ಯಾತಿಯನ್ನು ಇನ್ನಷ್ಟು ಉನ್ನತಗೊಳಿಸಿವೆ. ಹಸಿರಿನಿಂದ ಕೂಡಿದ ವಾತಾವರಣ, ಆಧುನಿಕ ಸೌಕರ್ಯಗಳು, ಬದ್ಧ ಶಿಕ್ಷಕರು, ಮತ್ತು ಸಮಗ್ರ



ಚಟುವಟಿಕೆಗಳ ಮೂಲಕ ಸ್ಕಾಲರ್ಸ್ ಶಾಲೆ ಒಂದು ಆದರ್ಶ ಶಿಕ್ಷಣ ಕೇಂದ್ರವಾಗಿ ಪೋಷಕರ ವಿಶ್ವಾಸವನ್ನು ಗೆದ್ದಿದೆ.

### ಭವಿಷ್ಯದ ದಿಕ್ಕಿನಲ್ಲಿ

ಗುಣಮಟ್ಟದ ಶಿಕ್ಷಣದ ಜೊತೆಗೆ ಶಿಸ್ತು, ನೈತಿಕ ಮೌಲ್ಯಗಳು, ಮತ್ತು ಸಮಾಜಕ್ಕೆ ಜವಾಬ್ದಾರಿಯುತ ನಾಗರಿಕರನ್ನು ರೂಪಿಸುವ ಗುರಿಯೊಂದಿಗೆ ಸ್ಕಾಲರ್ಸ್ ಶಾಲೆ ತನ್ನ ಯಶಸ್ಸಿನ ಯಾತ್ರೆಯನ್ನು ಮುಂದುವರೆಸುತ್ತಿದೆ. ಜಿಜಿಸ್ಕಾಲರ್ಸ್ ಶಾಲೆ ಶಿಕ್ಷಣದ ಹಸಿರು ಒಯಸಿಸ್‌ಟಟಿ ಎಂಬುದು ಇದರ ಘನತೆಗೆ ಸಾಕ್ಷಿಯಾಗಿದೆ.

# ರೋಗಿಗಳ ವಾರ್ಡ್‌ಗೆ ನುಗ್ಗಿದ ಬೀದಿ ನಾಯಿ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ : ಹಾಸನದ ಹಿಮ್ಸ್ ಆಸ್ಪತ್ರೆಯಲ್ಲಿ ರೋಗಿಗಳ ಚಿಕಿತ್ಸೆಗೆ ತೊಡಕಾಗುವಂತಹ ಆಘಾತಕಾರಿ ಘಟನೆಯೊಂದು ನಡೆದಿದೆ. ಆಸ್ಪತ್ರೆಯ ಮೂರನೇ ಮಹಡಿಯ ವಾರ್ಡ್ ನಂಬರ್ 340ಕ್ಕೆ ಬೀದಿ ನಾಯಿಯೊಂದು ನುಗ್ಗಿರುವ ಘಟನೆ ಸಾರ್ವಜನಿಕರಲ್ಲಿ ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ.

ರಾತ್ರಿ ವೇಳೆ ರೋಗಿಗಳು ಚಿಕಿತ್ಸೆ ಪಡೆದು ಮಲಗಿರುವಾಗ ಬೀದಿ ನಾಯಿಯೊಂದು ವಾರ್ಡ್‌ನೊಳಗೆ ಓಡಾಡಿದ ಘಟನೆ ರೋಗಿಗಳಲ್ಲಿ ಆತಂಕವನ್ನುಂಟು ಮಾಡಿದೆ. ಆಸ್ಪತ್ರೆಯ ಸಿಬ್ಬಂದಿ ಮತ್ತು ಸೆಕ್ಯೂರಿಟಿ ಗಾರ್ಡ್‌ಗಳ ನಿರ್ಲಕ್ಷ್ಯದಿಂದಾಗಿ ನಾಯಿಯೊಂದು ಮೂರನೇ ಅಂತಸ್ತಿನವರೆಗೆ ತಲುಪಿ ವಾರ್ಡ್‌ಗೆ ಪ್ರವೇಶಿಸಿದೆ ಎಂದು ಆರೋಪಿಸಲಾಗಿದೆ.

ರೋಗಿಗಳ ಕಡೆಯವರು ಆಸ್ಪತ್ರೆಗೆ ಬಂದಾಗ ಉಡಾಫೆಯಿಂದ ವರ್ತಿಸುವ ಸೆಕ್ಯೂರಿಟಿ ಗಾರ್ಡ್‌ಗಳು, ಬೀದಿ ನಾಯಿಯೊಂದು ವಾರ್ಡ್‌ಗೆ ನುಗ್ಗಿದಾಗ ಕಣ್ಮುಚ್ಚಿ ಕುಳಿತಿದ್ದಾರೆ ಎಂದು ಸ್ಥಳೀಯರು ದೂರಿದ್ದಾರೆ. ನಾಯಿಯು ವಾರ್ಡ್‌ನಲ್ಲಿ ಸುತ್ತಾಡಿ, ಯಾವುದೇ ತೊಂದರೆಯಾಗದೆ ಹೊರಗೆ ತೆರಳಿದ್ದರೂ, ಈ ಘಟನೆ ಆಸ್ಪತ್ರೆಯ ಭದ್ರತೆ ಮತ್ತು ಸ್ವಚ್ಛತೆಯ ಕುರಿತು ಗಂಭೀರ ಪ್ರಶ್ನೆಗಳನ್ನು ಎತ್ತಿದೆ.

ಹಾಸನದಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚುತ್ತಿರುವ ಬಗ್ಗೆ ಸಾರ್ವಜನಿಕರು ಈಗಾಗಲೇ ಆತಂಕ ವ್ಯಕ್ತಪಡಿಸಿದ್ದು, ಜಿಲ್ಲಾಸ್ಪತ್ರೆಯ ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ತೀವ್ರ ಆಕ್ಷೇಪ ವ್ಯಕ್ತವಾಗಿದೆ. ಈ ಘಟನೆಯ ಬಗ್ಗೆ ತನಿಖೆ ನಡೆಸಿ, ಜವಾಬ್ದಾರರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಸ್ಥಳೀಯರು ಒತ್ತಾಯಿಸಿದ್ದಾರೆ.

# ವಿಪತ್ತು ನಿರ್ವಹಣೆ: ಕ್ರಿಯಾ ಯೋಜನೆ ತಯಾರಿಸಲು ಸೂಚನೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಜಿಲ್ಲೆಯಲ್ಲಿ ವಿಪತ್ತು ನಿರ್ವಹಣೆಗಾಗಿ ಪ್ರತಿ ತಾಲ್ಲೂಕಿನಲ್ಲಿ ದುರ್ಬಲ ಸ್ಥಳಗಳನ್ನು ಗುರುತಿಸಿ ಅಗತ್ಯ ಕ್ರಿಯಾ ಯೋಜನೆ ತಯಾರಿಸಿ ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಸೂಚಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯಲ್ಲಿ ಮಾತನಾಡಿ, ಅನಿರೀಕ್ಷಿತ ಹಾಗೂ ಆಕಸ್ಮಿಕವಾಗಿ ಸಂಭವಿಸಬಹುದಾದ ಅವಘಡಗಳನ್ನು ತಡೆಯಲು ಮುನ್ನೆಚ್ಚರಿಕೆ ವಹಿಸಿ ಸಿದ್ಧತೆ ಮಾಡಿಕೊಳ್ಳಬೇಕು.

ಉದಾಸಿನ ಮಾಡಿ ಯಾವುದೇ ವಿಷಯವನ್ನು ಲಘುವಾಗಿ ತೆಗೆದುಕೊಳ್ಳದೆ ಗಂಭೀರವಾಗಿ ಪರಿಗಣಿಸಿ ಕ್ರಮ ವಹಿಸುವಂತೆ ಅಧಿಕಾರಿಗಳಿಗೆ



ಸೂಚಿಸಿದರು.

ತುರ್ತು ಸಂದರ್ಭಗಳನ್ನು ಸಮರ್ಪಕವಾಗಿ ನಿರ್ವಹಿಸಲು ಕಮ್ಯೂನಿಕೇಷನ್ ಪ್ಲಾನ್ ಮಾಡಿಕೊಳ್ಳಿ ಎಂದರಲ್ಲದೆ, ಅಗತ್ಯ ಪರಿಕರಗಳನ್ನು ದಾಸ್ತಾನು ಇರುವಂತೆ ನೋಡಿಕೊಳ್ಳಬೇಕು. ಸಮನ್ವಯತೆಯಿಂದ ಕಾರ್ಯ ನಿರ್ವಹಣೆ ಮಾಡುವಂತೆ ತಿಳಿಸಿದರು.

ರಾಷ್ಟ್ರೀಯ ಹೆದ್ದಾರಿ 75ರಲ್ಲಿ ವಾಹನಗಳ ಸಂಚಾರಕ್ಕೆ ಸೂಚನಾ ಫಲಕ ಅಳವಡಿಸಲು ಕ್ರಮ ವಹಿಸಬೇಕು. ನಿರಂತರವಾಗಿ ಮಳೆ ಬೀಳುತ್ತಿರುವುದರಿಂದ ಎಚ್ಚರ ವಹಿಸಿ 15 ದಿನಗಳು ಪ್ರತಿದಿನ ಸ್ಥಳೀಯ ತಂಡ ಗಮನಹರಿಸಿ ಎಂದ ಅವರು ಪ್ರತಿ ತಾಲ್ಲೂಕಿನಲ್ಲಿ ಕಂಟ್ರೋಲ್ ರೂಂ ತೆರೆಯಬೇಕು ಎಂದರಲ್ಲದೆ ಸ್ಥಳೀಯ ಸ್ವಯಂ ಸೇವಾ ಸಂಸ್ಥೆಗಳನ್ನು ಬಳಸಿಕೊಂಡು ಜನರಿಗೆ ಅರಿವು ಮೂಡಿಸಲು ಕ್ರಮವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಬೀಳುವ ಹಂತದಲ್ಲಿರುವ ಮರಗಳನ್ನು ಗುರುತಿಸಿ ಅಗತ್ಯಕ್ರಮವಹಿಸಿ, ಹೆದ್ದಾರಿಯಲ್ಲಿ ವಾಹನ ಚಾಲನೆಗೆ ಅನುಕೂಲವಾಗುವಂತೆ ಸೂಚನಾ ಫಲಕಗಳು ಹಾಗೂ ಎಚ್ಚರಿಕೆ ಫಲಕಗಳನ್ನು ಅಳವಡಿಸಲು ಗಮನಹರಿಸಲು ನಿರ್ದೇಶನ ನೀಡಿದರು.

ಯಾವುದೇ ಜೀವ ಹಾನಿಯಾಗದಂತೆ ತಡೆಯಲು ಮುನ್ನೆಚ್ಚರಿಕೆ ವಹಿಸಬೇಕು ಎಂದ ಅವರುಅಧಿಕ ಮಳೆ ಬೀಳುತ್ತಿರುವ ಸಂದರ್ಭದಲ್ಲಿ ಬದಲಿ ಮಾರ್ಗ ಬಳಸಲು ಪ್ರಯಾಣಿಕರಿಗೆ ಉತ್ತೇಜಿಸಬೇಕು ಎಂದು ತಿಳಿಸಿದರು.

ಉಪ ಅರಣ್ಯ ಸಂರಕ್ಷಣಾಧಿಕಾರಿ ಸೌರಬ್ ಕುಮಾರ್, ಅಪರ ಜಿಲ್ಲಾಧಿಕಾರಿ ಮಂಜುನಾಥ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ವೆಂಕಟೇಶ್ ನಾಯ್ಡು, ತಮ್ಮಯ್ಯ, ಉಪ ವಿಭಾಗಾಧಿಕಾರಿಗಳಾದ ಮಾರುತಿ, ರಾಜೇಶ್ ಹಾಗೂ ಇತರರಿದ್ದರು.

# ಸಂಪುಟಕ್ಕೆ ರಾಜಣ್ಣ ಸೇರಿಸಿಕೊಳ್ಳಲು ಆಗ್ರಹಿಸಿ ಪ್ರತಿಭಟನೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಮಾಜಿ ಸಚಿವ ಕೆ.ಎನ್. ರಾಜಣ್ಣ ಅವರನ್ನು ಪುನಃ ಸಂಪುಟಕ್ಕೆ ಸೇರಿಸಿಕೊಳ್ಳಬೇಕೆಂದು ಆಗ್ರಹಿಸಿ ನಗರದಲ್ಲಿ ವಾಲ್ಮೀಕಿ ನಾಯಕರ ಸಂಘ, ಕರ್ನಾಟಕ ದಲಿತ ಸಂಘಟನೆಗಳ ಒಕ್ಕೂಟ ಹಾಗೂ ಮಾದಿಗ ಮೀಸಲಾತಿ ಹೋರಾಟ ಸಮಿತಿಯವರು ಬೃಹತ್ ಪ್ರತಿಭಟನೆ ನಡೆಸಿದರು.

ಹೇಮಾವತಿ ಪ್ರತಿಮೆ ಬಳಿಯಿಂದ ಎನ್.ವೃತ್ತದ ಮೂಲಕ ತಮಟೆ ಬಾರಿಸುತ್ತಾ, ರಾಜಣ್ಣ ಅವರ ಪರ ಘೋಷಣೆ ಮೊಳಗಿಸುತ್ತಾ ಮೆರವಣಿಗೆ ಹೊರಟ ನೂರಾರು ಮಂದಿ ಡಿಸಿ ಕಚೇರಿ ತಲುಪಿದರು.

ರಾಜಣ್ಣ ಅವರು ದೊಡ್ಡ ಪ್ರಮಾದ ಮಾಡಿಲ್ಲ, ಹಾಗಾಗಿ ಅವರನ್ನು ಮತ್ತೆ ಸಂಪುಟಕ್ಕೆ ಸೇರಿಸಿಕೊಳ್ಳಬೇಕು. ಇಲ್ಲದಿದ್ದರೆ ಹೋರಾಟ ನಿರಂತರವಾಗಿ ಮುಂದುವರಿಯಲಿದೆ ಎಂದು ಎಚ್ಚರಿಸಿದರು. ತುಮಕೂರಿನ ಸರಸ್ವತಿ ಮಾತನಾಡಿ, ರಾಹುಲ್ ಗಾಂಧಿ ಅವರಿಗೆ ಕನ್ನಡ ಬರಲ್ಲ, ಆದರೆ ಅವರಿಗೆ ಒತ್ತಡ ಹೇರಿ ರಾಜಣ್ಣ ಅವರ ಮೇಲೆ ಏಕಾಏಕಿ ಕ್ರಮ ಆಗಿದೆ. ತುಮಕೂರಿನಲ್ಲಿ ಕಾಂಗ್ರೆಸ್



ಏಳೆಂಟು ಸ್ಥಾನ ಗೆಲ್ಲಲು ರಾಜಣ್ಣ ಅವರೇ ಕಾರಣ, ಹೋರಾಟ ಸ್ವಭಾವದ ಅವರು ಸದಾ ಬಡವರ ಪರ ಕೆಲಸ ಮಾಡಿದ್ದಾರೆ. ಅಂಥವರು ವಾಲ್ಮೀಕಿ ಸಮಾಜದಲ್ಲಿ ಹುಟ್ಟಿದ್ದೇ ತಪ್ಪಾಯಿತಾ ಎಂಬ ನೋವು ನಮ್ಮನ್ನು ಕಾಡುತ್ತಿದೆ. ರಮೇಶ್ ಜಾರಕಿಹೊಳಿಗೆ ಹನಿಟ್ರ್ಯಾಪ್ ಮಾಡಿದರು. ನಾಗೇಂದ್ರ ಅವರ ಮೇಲೆ ಅರೋಪ ಹೊರಿಸಿದರು. ಈಗ ರಾಜಣ್ಣ ಅವರ ಮೇಲೆ ಕ್ರಮ ಆಗಿದೆ. ಕಾಂಗ್ರೆಸ್ ಕೈ ಹಿಡಿಯುವುದೇ ಹೆಚ್ಚು ಅಹಿಂದ ಮತಗಳು, ರಾಜಣ್ಣ ಅವರಿಗೆ ಆಗಿರುವ ಅನ್ಯಾಯ ಸರಿಪಡಿಸದೇ ಇದ್ದರೆ, ಮರಳಿ ಮಂತ್ರಿಸ್ಥಾನ ಕೊಡದಿದ್ದರೆ ಮುಂದಿನ ದಿನಗಳಲ್ಲಿ ಕಾಂಗ್ರೆಸ್‌ಗೆ ತಕ್ಕ ಪಾಠ ಕಲಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ದಲಿತ ಮುಖಂಡ ಹೆಚ್. ಕೆ.ಸಂದೇಶ್ ಮಾತನಾಡಿ, ಮಾತಿನ ಭರದಲ್ಲಿ ಆಡಿದ ಮಾತನ್ನೇ ಕಾರಣವಾಗಿಸಿ ರಾಜಣ್ಣ ಅವರನ್ನು ಸಂಪುಟದಿಂದ ಕೈಬಿಟ್ಟಿರುವುದು ಸರಿಯಲ್ಲ. ರಾಜಣ್ಣ ಅವರು ಸಹಕಾರ ಕ್ಷೇತ್ರದ ದೊರೆ, ಅವರು ಮೀಸಲು ಕ್ಷೇತ್ರದಿಂದ ಗೆದ್ದಿಲ್ಲ, ಅಕ್ರಮ ಮಾಡಿ ವಜಾ ಆಗಿದ್ರೆ ನಮ್ಮ ತಕರಾರು ಇಲ್ಲ. ಒಂದು ನೋಟಿಸ್ ಸಹ ನೀಡದೆ ಸಚಿವ ಸ್ಥಾನ ಕಿತ್ತುಕೊಂಡಿರುವುದು ನಮಗೆಲ್ಲ ಆತಂಕ ತಂದಿದೆ. ನೇರ, ನಿಷ್ಠೂರ ನಡೆಯ ನಾಯಕನಿಗೆ ಹೀಗೆ ಮಾಡಿರುವುದು ಸರಿಯಲ್ಲ. ಸಿಎಂ, ಡಿಸಿಎಂ ಹಾಗೂ ಎಸ್ಟಿ-ಎಸ್‌ಸಿ ಸಮುದಾಯದವ ಶಾಸಕರು, ಸಚಿವರು ಹೈಕಮಾಂಡ್ ಮೇಲೆ ಒತ್ತಡ ಹೇರಿ ಮತ್ತೆ ಸಂಪುಟಕ್ಕೆ ಸೇರಿಸಿಕೊಳ್ಳಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಬೇಲೂರು ತಾಲೂಕು ವಾಲ್ಮೀಕಿ ನಾಯಕರ ಸಂಘದ ಅಧ್ಯಕ್ಷ ಮಧುನಾಯಕ, ಹಾಸನದ ರಂಗನಾಯಕ, ಚನ್ನರಾಯಪಟ್ಟಣದ ವಿನಯ್ ದೀಪು, ಅರಸೀಕೆರೆ ತಾಲೂಕು ಅಧ್ಯಕ್ಷ ಹನುಮಪ್ಪ ಗೊಲ್ಲರಹಳ್ಳಿ, ಆಲೂರು ಅಧ್ಯಕ್ಷ ದೇವರಾಜು, ಅರಕಲಗೂಡು ಅಧ್ಯಕ್ಷ ಬಸವನಾಯಕ, ವಾಲ್ಮೀಕಿ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಿವಪ್ಪನಾಯಕ,ಕಾಂಗ್ರೆಸ್ ಎಸ್‌ಟಿ ಘಟಕದ ಜಿಲ್ಲಾಧ್ಯಕ್ಷ ಗಣೇಶ್ ನಾಯಕ್, ವಾಲ್ಮೀಕಿ ಸಮಾಜದ ಮುಖಂಡರಾದ ಶಿವಕುಮಾರ್, ಶಂಕರನಾಯಕ, ಶಿವಮೂರ್ತಿ, ರಾಜನಾಯಕ, ಮಾದಿಗ ದಂಡೋರ ರಾಜ್ಯ ಕಾರ್ಯದರ್ಶಿ ವಿಜಯ್ ಕುಮಾರ್, ಡಿಎಸ್‌ಎಸ್ ಸಂಚಾಲಕ ಸೋಮಶೇಖರ್, ರೇಖಾ ಜಯಣ್ಣ, ದಿನೇಶ್, ವಿಠಲ್, ರಾಜು ಗೊರೂರು, ಜಗದೀಶ್, ಪ್ರದೀಪ್, ರಂಗನಾಥ್, ಮಹೇಶ್, ಸಿದ್ದಮಲ್ಲನಾಯಕ, ದೇವರಾಜು, ನೀಡುಗರಹಳ್ಳಿ ಸಿದ್ದಪ್ಪ, ರಾಜೇಶ್, ಈರೇಶ್ ಹಿರೇಹಳ್ಳಿ, ರಾಜಶೇಖರ್ ಹುಲಿಕಲ್, ತಿರುಪತಿ ಗಿರೀಶ್ ಇತರರಿದ್ದರು.

# ಬೆಳವಡಿ ಮಲ್ಲಮ್ಮ ಹೋರಾಟ ಎಲ್ಲರಿಗೂ ಸ್ಫೂರ್ತಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ವೀರವನಿತೆ ಬೆಳವಡಿ ಮಲ್ಲಮ್ಮ ಅವರ ಹೋರಾಟದ ಕಿಚ್ಚು, ಸ್ವಾಭಿಮಾನ ಪ್ರತಿಯೊಬ್ಬ ಮಹಿಳೆಗೆ ಆದರ್ಶವಾಗಬೇಕು ಎಂದು ಜಿಲ್ಲಾ ವೀರಶೈವ-ಲಿಂಗಾಯತ ಸಮಾಜದ ತಾಲ್ಲೂಕು ಮಹಿಳಾ ಘಟಕದ ಅಧ್ಯಕ್ಷೆ ಮಮತಾ ಪಾಟೀಲ್ ಹೇಳಿದರು.

ನಗರದ ತಣ್ಣೀರುಹಳ್ಳ ಮಠದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ




ಮಹಾಸಭಾ ಜಿಲ್ಲಾ ಹಾಗು ಮಹಿಳಾ ಘಟಕದಿಂದ ಸೋಮವಾರ ಹಮ್ಮಿಕೊಂಡಿದ್ದ ಶರಣೆ ಬೆಳವಡಿ ಮಲ್ಲಮ್ಮ ಅವರ ಜಯಂತಿಯಲ್ಲಿ ಮಾತನಾಡಿ, ಬೆಳವಡಿ ಮಲ್ಲಮ್ಮ ಅವರ ಜೀವನ ಚರಿತ್ರೆಯನ್ನು ಎಲ್ಲರೂ ಅರ್ಥೈಸಿಕೊಳ್ಳಬೇಕು. ಸ್ವಸ್ಥ ಸಮಾಜ ನಿರ್ಮಾಣಕ್ಕೆ ಅವರು ನೀಡಿದ ಕೊಡುಗೆ ಅಪಾರವೆಂದರು. ಪ್ರಧಾನ ಕಾರ್ಯದರ್ಶಿ ಧನಲಕ್ಷ್ಮಿ, ಹಳೆಕೋಟೆ ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲರಾದ ಜಯಶೀಲಮ್ಮ, ಜಿಲ್ಲಾ ಘಟಕದ ನಿರ್ದೇಶಕ ನಂದೀಶ್, ಲೋಕೇಶ್ ಮಾತನಾಡಿದರು. ಭಾರತ ಸೇವಾದಳ ವಲಯ ಸಂಘಟಕಿ ವಿ.ಎಸ್. ರಾಣಿ, ಸುಧಾ ಮತ್ತಿತರರು ಭಾಗವಹಿಸಿದ್ದರು.

# ಶಾಂತಿಗ್ರಾಮದಲ್ಲಿ ಇನ್‌ಸ್ಪೈರ್ ಅವಾರ್ಡ್ 2025

ಹಾಸನ: ತಾಲ್ಲೂಕಿನ ಶಾಂತಿಗ್ರಾಮ ಟೋಲ್ ಪ್ಲಾಜಾದಲ್ಲಿ ಇಂಟರ್ರೈಸ್ ಟ್ರಸ್ಟ್‌ನ ಪೋರ್ಟ್ ಪೊಲಿಯೋ ಕಂಪನಿಯಾದ ದೇವಿಹಳ್ಳಿ ಹಾಸನ್ ಟೋಲ್‌ವೇ ಪ್ರೈವೆಟ್ ಲಿಮಿಟೆಡ್‌ನಿಂದ ಇನ್‌ಸ್ಪೈರ್ ಅವಾರ್ಡ್ 2025 ಆಚರಿಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿದ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಮಾತನಾಡಿ, ಸರ್ಕಾರಿ ಶಾಲಾ ಮಕ್ಕಳನ್ನು ಪ್ರೋತ್ಸಾಹಿಸುವಲ್ಲಿ ಮತ್ತು ಶಿಕ್ಷಣ,



ಸ್ಥಿರತೆಯ ಅಭಿವೃದ್ಧಿ, ಸಮುದಾಯ ಸೇವೆಗಳತ್ತ ಡಿಎಚ್‌ಟಿಪಿಎಲ್ ನೀಡುತ್ತಿರುವ ಬದ್ಧತೆ ಶ್ಲಾಘನೀಯ ಎಂದರು. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸಿದ ಶಾಂತಿಗ್ರಾಮ ಸುತ್ತಲಿನ ಸರ್ಕಾರಿ ಶಾಲೆಗಳ ಮೂವರು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಸನ್ಮಾನಿಸಲಾಯಿತು.

ಎನ್‌ಹೆಚ್‌ಎಐ ಉಪ ಮಹಾಪ್ರಬಂಧಕ ಸಯ್ಯದ್ ಅಮಾನುಲ್ಲಾ, ಶಾಂತಿಗ್ರಾಮ ಪೊಲೀಸ್ ಠಾಣೆ ಉಪನಿರೀಕ್ಷಕ ಅರುಣ್, ಕರ್ನಲ್ ಕೆ.ಎಸ್. ನಟೇಶ್, ಹೆದ್ದಾರಿ ಎಂಜಿನಿಯರ್ ಕೆ.ವಿ. ಸತೀಶ್ ಕುಮಾರ್, ಸಿ.ಕೆ. ಸುನಿಲ್ ಮತ್ತಿತರರು ಇದ್ದರು.

## ಇತಿಹಾಸದಲ್ಲಿ ಈ ದಿನ

### ಆಗಸ್ಟ್-20

1794: ಅಮೇರಿಕಾದಲ್ಲಿ ನಡೆದ ಫಾಲನ್ ಟಿಂಬರ್ಸ್ ಯುದ್ಧದಲ್ಲಿ ಜನರಲ್ ಆಂಥನಿ ವೇನ್ ಅವರ ನೇತೃತ್ವದ ಅಮೆರಿಕನ್ ಸೇನೆ ಜಯ ಸಾಧಿಸಿತು.

1828: ಉರುಗ್ವೆ ದೇಶವು ಸ್ವತಂತ್ರ ರಾಷ್ಟ್ರವಾಗಿ ಘೋಷಿಸಲ್ಪಟ್ಟಿತು.

1882: ರಷ್ಯಾದಲ್ಲಿ ಟೊಲ್ಸ್ಟಾಯ್ ಅವರ ಪ್ರಸಿದ್ಧ ಕೃತಿ Anna Karenina ಮೊದಲ ಬಾರಿಗೆ ಪ್ರಕಟವಾಯಿತು.

1940: ಪ್ರಸಿದ್ಧ ಕ್ರಾಂತಿಕಾರಿ ಲಿಯೋನ್ ಟ್ರಾಟ್ಸ್ಕಿ ಅವರನ್ನು ಮೆಕ್ಸಿಕೋದಲ್ಲಿ ಹತ್ಯೆ ಮಾಡಲಾಯಿತು.

1944: ದ್ವಿತೀಯ ವಿಶ್ವಯುದ್ಧದಲ್ಲಿ ಸೊವಿಯತ್ ಪಡೆಗಳು ರುಮೇನಿಯಾದ ರಾಜಧಾನಿ ಬುಕಾರೆಸ್ಟ್‌ಗೆ ಪ್ರವೇಶಿಸಿತು.

1968: ಚೆಕೊಸ್ಲೊವಾಕಿಯಾದ ಪ್ರಾಗ್ ಸ್ಪ್ರಿಂಗ್ ಪ್ರಜಾತಾಂತ್ರಿಕ ಚಳವಳಿಯನ್ನು ನಿಗ್ರಹಿಸಲು ಸೊವಿಯತ್ ಪಡೆಗಳು ಆಕ್ರಮಣ ನಡೆಸಿದವು.

1975: ನಾಸಾದ ವೈಕಿಂಗ್ 1 ಬಾಹ್ಯಾಕಾಶ ನೌಕೆ ಮಂಗಳ ಗ್ರಹದ ಕಕ್ಷೆಗೆ ಪ್ರವೇಶಿಸಿತು.

1991: ಎಸ್ಟೋನಿಯಾ ದೇಶವು ಸೋವಿಯತ್ ಯೂನಿಯನ್‌ನಿಂದ ಸ್ವಾತಂತ್ರ್ಯ ಘೋಷಿಸಿತು.

#### ಜನನ

1779: ಜೆಬುಲನ್ ಪೈಕ್, ಅಮೆರಿಕನ್ ಸಂಶೋಧಕ ಮತ್ತು ಸೇನಾ ಅಧಿಕಾರಿ

1901: ಸಲೋವಡೋರ್ ಲುರಿಯಾ, ಇಟಾಲಿಯನ್ ಮೂಲದ ಅಮೆರಿಕನ್ ವಿಜ್ಞಾನಿ ಮತ್ತು ನೋಬೆಲ್ ಪ್ರಶಸ್ತಿ ಪುರಸ್ಕೃತರು

1915: ಫತ್ಮಾ ನೆಸರೇತ್, ಟರ್ಕಿಶ್ ಕವಯತ್ರಿ

1944: ರಾಜೀವ್ ಗಾಂಧಿ, ಭಾರತದ ಮಾಜಿ ಪ್ರಧಾನಮಂತ್ರಿ

1946: ಬಿಲ್ ಕ್ಲಿಂಟನ್, ಅಮೆರಿಕಾದ 42ನೇ ಅಧ್ಯಕ್ಷರು

#### ಮರಣ

1915: ಪೌಲ್ ಎರೆನ್ಫೆಸ್ಟ್, ಆಸ್ಟ್ರಿಯನ್ ಭೌತಶಾಸ್ತ್ರಜ್ಞ

1940: ಲಿಯೋನ್ ಟ್ರಾಟ್ಸ್ಕಿ, ರಷ್ಯನ್ ಕ್ರಾಂತಿಕಾರಿ

2012: ಫಿಲಿಸ್ ಡಿಲ್ಲರ್, ಅಮೆರಿಕನ್ ಹಾಸ್ಯ ನಟಿ

# ಕೃಷ್ಣನಿಲ್ಲವೆಂಬ ಭಾವ ಆವರಿಸಿದಾಕ್ಷಣ ಅರ್ಜುನ ಸೋತ...

- ಮಾಲಿನಿ ಗುರುಪ್ರಸನ್ನ

ಮೊನ್ನೆ ಹೀಗೆ ಬರೆದ ನಂತರ ಮುಂದುವರಿಸಲಾಗದೇ ನಿಲ್ಲಿಸಿಬಿಟ್ಟಿದ್ದೆ. ನಂತರದ ಕತೆ ಇದೆಯಲ್ಲ, ಅದು ಹಾಂಟಿಂಗ್...


ದ್ವಾರಕೆ ಮುಳುಗುವ ಮುನ್ನ ಅಲ್ಲಿದ್ದವರನ್ನು ಹಸ್ತಿನಾವತಿಗೆ ಕರೆತರುವಾಗ ಕಳ್ಳರ ಗುಂಪಿನ ದಾಳಿಗೆ ಸೋತ ಅರ್ಜುನ ಧರ್ಮರಾಯನ ಮುಂದೆ ಬಂದು ನಿಂತಿದ್ದಾನೆ. ಕಳ್ಳರು ಕೇವಲ ಸಂಪತ್ತನ್ನಷ್ಟೇ ದೋಚಿಲ್ಲ, ಯಾದವ ತರುಣಿಯರನ್ನೂ ಹೊತ್ತೊಯ್ದಿದ್ದಾರೆ. ಅರ್ಜುನ ದೀನನಾಗಿದ್ದಾನೆ, ಅಕ್ಷರಶಃ ಕುಸಿದು ಹೋಗಿದ್ದಾನೆ. ಧರ್ಮರಾಯನೂ ಇವನ ಸ್ಥಿತಿ ನೋಡಿ ಕಂಗಾಲಾಗಿದ್ದಾನೆ.. ಆಗ ಅರ್ಜುನ ಆಡುವ ಮಾತುಗಳಿವೆಯಲ್ಲ, ಅದು ಮಹಾಭಾರತದ ಹೈಲೈಟ್. ಒಂದು ರೀತಿಯಲ್ಲಿ ಕ್ಲೈಮ್ಯಾಕ್ಸ್.

ಅಂತಹ ಮಹಾಭಾರತ ಯುದ್ಧದಲ್ಲಿ ಅಪ್ರತಿಮ ಸಾಹಸವನ್ನು ತೋರಿದವರು ನಾವು, ಹನ್ನೊಂದು ಅಕ್ಷೋಹಿಣಿ ಸೈನ್ಯವನ್ನು ಪುಡಿಗಟ್ಟಿದವರು ನಾವು, ಅದೇ ಗಾಂಡೀವ, ಅದೇ ಅಕ್ಷಯ ಬತ್ತಳಿಕೆ, ಅಂಥದ್ದೇ ದಿವ್ಯರಥ, ಅದೇ ಅರ್ಜುನ ... ಯಾಕೆ ಸೋತೆ ನಾನು...ಅದೂ ಈ ಸಣ್ಣ ಕಳ್ಳಕಾಕರ ಗುಂಪಿನೆದುರು..

ಈಗನ್ನಿಸುತ್ತದೆ ಆ ಕುರುಕ್ಷೇತ್ರದ ಮಹಾಯುದ್ಧವನ್ನು ಗೆದ್ದವರು ನಾನಲ್ಲ, ಭೀಮನಲ್ಲ, ಪಂಚ ಪಾಂಡವರನ್ನೊಳಗೊಂಡು ನಮ್ಮ ಪಕ್ಷದ ಮಹಾವೀರರೂ ಅಲ್ಲ. ಅವರನ್ನು ಸೋಲಿಸಿದ್ದು ನಾವೆಂದು ಭ್ರಮಿಸಿದ್ದೆವು ಅಷ್ಟೇ. ಅವರನ್ನು ನಿಜವಾಗಿ ಸೋಲಿಸಿದ್ದು ಆ ಒಂದು ಹನಿ ಕಣ್ಣೀರು. ದ್ರೌಪದಿಯ ಕಣ್ಣಿಂದ ಕೃಷ್ಣನ ಪಾದದ ಮೇಲೆ ಜಾರಿದ ಆ ಒಂದು ಹನಿ ಕಣ್ಣೀರು... ಅರ್ಜುನ ವಿಷಾದದ ತುತ್ತ ತುದಿಯಲ್ಲಿದ್ದಾನೆ.

### ಆಗೊಂದು ಫ್ಲಾಶ್ ಬ್ಯಾಕ್

ಪಾಂಡವರು ದ್ಯೂತದಲ್ಲಿ ಸೋತು ವನವಾಸದಲ್ಲಿದ್ದಾಗ ಕೃಷ್ಣ ಅಲ್ಲಿಗೆ ಪಾಂಡವರನ್ನು ನೋಡಲು ಬರುತ್ತಾನೆ. ಅವರನ್ನು ಸಮಾಧಾನಿಸುತ್ತಿರುವ ಹೊತ್ತಿನಲ್ಲಿ



ದ್ರೌಪದಿ ಕೃಷ್ಣ ಬಂದಿದ್ದನ್ನು ಕೇಳಿ, ರಾಜಸೂಯಯಾಗದ ಸಂದರ್ಭದಲ್ಲಿ ಪವಿತ್ರ ಜಲದಲ್ಲಿ ಮಿಂದೆದ್ದ ಮುಡಿ ಈಗ ಬಿಚ್ಚು ಕೂದಲಾಗಿದ್ದನ್ನು ಕೃಷ್ಣನಿಗೆ ತೋರುವಂತೆ ತನ್ನ ಕೈಗಳಲ್ಲಿ ಹಿಡಿದೇ ನಡೆದು ಬರುತ್ತಾಳೆ ನೋಡು ಕೃಷ್ಣ, ನನ್ನ ಗಂಡಂದಿರು ಜಗತ್ತಿನ ಸೋಲರಿಯದ ಮಹಾವೀರರು, ನನ್ನ ತವರಿನವರು ಮಹಾವೀರರು.. ಆದರೆ ನಿಜಾರ್ಥದಲ್ಲಿ ನನಗೆ ಗಂಡಂದಿರಿಲ್ಲ, ತಂದೆಯಿಲ್ಲ.. ಯಾರೂ ಇಲ್ಲದ ಅನಾಥೆ ನಾನು... ಆ ಹೊತ್ತಿನಲ್ಲಿ ಯಾರೂ ನನ್ನ ಕಾಯಲಿಲ್ಲ ಉಕ್ಕಿ ಬಂದ ದುಃಖವನ್ನು ಹತ್ತಿಕ್ಕುತ್ತಾ ಮತ್ತೆ ತನ್ನ ಕೂದಲನ್ನು ಎತ್ತಿ ಕೃಷ್ಣನ ಮುಂದೆ ತೋರಿಸುತ್ತಾಳೆ ನೋಡು ಕೃಷ್ಣಾ, ರಾಜ್ಯ, ಕೋಶ ಎಲ್ಲ ಕಳೆದುಕೊಂಡು ನಿಂತಿದ್ದೇವೆ ನಾವು.. ಕಷ್ಟ ನಮ್ಮೆಲ್ಲರಿಗೂ ಬಂದಿದೆ ನಿಜ, ಆದರೆ ನನ್ನ ಕಷ್ಟ ಅಷ್ಟೇ ಅಲ್ಲ, ಅದು ಇಲ್ಲಿ ಯಾರಿಗೂ ಅರ್ಥವಾಗುತ್ತಿಲ್ಲ. ನನ್ನ ನೋವಿನ ಆಳದ ಅರಿವೂ ಇವರ್ಯಾರಿಗೂ ಇಲ್ಲ. ನಿನಗೆ ನನ್ನ ಸ್ಥಿತಿ ಅರ್ಥವಾಗ್ತಿದೆಯಲ್ಲ ಕೃಷ್ಣಾ...ನಿನಗಾದರೂ ಅರ್ಥವಾಗ್ತಿದೆಯಲ್ಲ ಎಂದು ಹೇಳುತ್ತಾ ಉದ್ವೇಗದಲ್ಲಿ ಕುಸಿದು ಅವನ ಪಾದಕ್ಕೆರಗುತ್ತಾಳೆ. ಹಾಗೆ ಬಾಗಿದಾಗ ಕಟ್ಟಿಟ್ಟಿದ್ದ ಅವಳ ದುಗುಡ ಒಂದು ಹನಿ ಕಣ್ಣೀರಾಗಿ ಕೃಷ್ಣನ ಪಾದದ ಮೇಲೆ ಬೀಳುತ್ತದೆ. ಕೃಷ್ಣ ಅವಳನ್ನು ಸಂತೈಸುತ್ತಾನೆ ನಿನ್ನ ಈ ಒಂದು ಹನಿ ಕಣ್ಣೀರು, ಇದನ್ನು ತರಿಸಿದವರ ಮನೆಯಲ್ಲಿ ಈ ಹನಿ ಕಣ್ಣೀರಿನ ಕಾಲುವೆಯಾಗುತ್ತದೆ. ಇದು ಸತ್ಯ.

ಈಗ ಅರ್ಜುನ ಅದನ್ನು ನೆನೆಯುತ್ತಿದ್ದಾನೆ. ಇಲ್ಲಿಯವರೆಗೆ ಇದ್ಯಾವುದೂ ಅವನಿಗೆ ಅರಿವಿರಲಿಲ್ಲವೆಂದಲ್ಲ, ದ್ರೌಪದಿಯ ನೋವು, ಕಣ್ಣೀರು, ಅವಳ ರೋಷ ಎಲ್ಲವೂ ಪಾಂಡವರಿಗೆ ಗೊತ್ತಿದ್ದೇ. ಅದಕ್ಕಾಗಿ ಅವರೂ ನೊಂದವರೇ. ಅದಕ್ಕೆ ಕಾರಣರಾದವರಿಗೆ ತಮ್ಮ ಶೌರ್ಯದ ಎದಿರೇಟು ಕೊಟ್ಟು ಅವಳ ನೋವನ್ನು ತಣಿಸಿದೆವೆಂದುಕೊಂಡಿದ್ದ ಅರ್ಜುನ ಈಗ ಅದೆಲ್ಲವನ್ನೂ ಕಳಚಿ ನಿಂತಿದ್ದಾನೆ. ಅರಿವಿದ್ದೂ ಅರಿವಿಲ್ಲದ ಮನಸ್ಥಿತಿಯಿಂದ ಹೊರಬಂದಿದ್ದಾನೆ. ಇದು ಜ್ಞಾನೋದಯ, ಕುರುಕ್ಷೇತ್ರದ ಭಗವದ್ಗೀತೆ ಸಂಪೂರ್ಣ ನೆತ್ತಿಯೊಳಗಿಳಿದ ಹೊತ್ತು. ಮಮ ಪ್ರಾಣಾಹಿ ಪಾಂಡವಾಃ ಎಂದ ಕೃಷ್ಣ, ಅದನ್ನು ರುಜುವಾತು ಪಡಿಸಿದ ನಂತರವೂ, ಅದಕ್ಕಿಂತ ಮಹತ್ವ ಕೊಟ್ಟಿದ್ದು ದ್ರೌಪದಿಯ ಅಸಹಾಯಕ ಕಣ್ಣೀರಿಗೆ, ಅವನು ಎಲ್ಲಕ್ಕಿಂತ ಪರಿಗಣಿಸಿದ್ದು ಆ ಒಂದು ಹನಿ ಕಣ್ಣೀರನ್ನು!

ಕೃಷ್ಣ ಯಾರ ಪರ? ಯಾಕೆ ಅವನು ಯಾರ ಪರವಾದರೂ ನಿಲ್ಲುತ್ತಾನೆ? ಅಂತಹ ತುರ್ತು ಅವನಿಗೇನು? ಅಂತಹ ಮೋಹ ಅವನಿಗೇನು? ಅವನು ಧರ್ಮದ ಪರ, ಧರ್ಮದಲ್ಲಿದ್ದು ನೊಂದವರ ಪರ .. ಅವರ ನೊಂದ ಕಣ್ಣೀರಿನ ಪರ !!!

ಅರ್ಜುನನ ಮಾತುಗಳನ್ನು ಕೇಳಿದಾಕ್ಷಣ ಇನ್ನೊಂದೂ ಮಾತನಾಡದ ಯುಧಿಷ್ಠಿರ ಪರೀಕ್ಷಿತನಿಗೆ ಪಟ್ಟ ಕಟ್ಟಿ ತಮ್ಮಂದಿರೊಡನೆ, ದ್ರೌಪದಿಯೊಡನೆ ಮಹಾಪ್ರಸ್ಥಾನಕ್ಕೆ ಹೊರಡುತ್ತಾನೆ.. ಈ ಘಟನೆಗಳನ್ನು ನಿರೂಪಿಸಿದ ವ್ಯಾಸರ ಕುರಿತು ನಿಬ್ಬೆರಗಾಗಿ ಯೋಚಿಸುತ್ತಿದ್ದೇನೆ. ಇಡೀ ಕಥೆಯಲ್ಲಿ ಜಗದೇಕ ವೀರರ ಬಗ್ಗೆ ವಿಸ್ತಾರವಾಗಿ ಅವರ ಶೌರ್ಯಸಾಹಸಗಳ ಕುರಿತು ವರ್ಣರಂಜಿತವಾಗಿ ಹೇಳುತ್ತಲೇ, ಕೊನೆಗೆ ಪುರುಷಹಂಕಾರವನ್ನು ಹೀಗೆ ನಿರ್ದಾಕ್ಷಿಣ್ಯವಾಗಿ ಕೊಚ್ಚಿ ಹಾಕುವ ಮಹಾಭಾರತಕ್ಕೆ, ಅದನ್ನು ಬರೆದ ವ್ಯಾಸರಿಗೆ ಸರಿಸಾಟಿಯೇ ಇಲ್ಲ... ಇಲ್ಲವೇ ಇಲ್ಲ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248